**ಸಾಕ್ಷಿಯನ್ನು ದಿನಾಂಕ 13/03/2023 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು : ಆರೋಪಿ ಪರ ಶ್ರೀ. ಆರ್.ಎಮ್.ಡಿ.ಆರ್. ವಕೀಲರಿಂದಃ**

ಆರೋಪಿತರು ನನಗೆ 13 ವರ್ಷಗಳಿಂದ ಗೊತು. ನಾನು ಖನಿಜ ಭವನಕ್ಕೆ ಹೋದಾಗ ಆರೋಪಿತರು ಪರಿಚಯವಾಗಿದ್ದರು. ಆರೋಪಿತರು ಖನಿಜ ಭವನದಲ್ಲಿ ಕೆಲಸ ಮಾಡುತ್ತಿರಲಿಲ್ಲ. 13 ವರ್ಷಗಳ ಹಿಂದೆ ಆರೋಪಿತರು ಸೊಸೈಟಿ ನಡೆಸುತ್ತಿದ್ದರು ಎಂದು ಗೊತ್ತು. ಆರೋಪಿರಾದ ರಂಗನಾಥ್ ಮತ್ತು ರಾಮಕೃಷ್ಣ ಅವರು ಬೋರ್ಡ್ ಮೆಂಬರ್ ಆಗಿದ್ದರೆಂದು ಗೊತ್ತು. ಆ ಸೊಸೈಟಿ ಎಲ್ಲಿ ಇದೆ ಎಂದು ಗೊತ್ತಿಲ್ಲ. ನಾನು ಯಾವತ್ತೂ ಆ ಸೊಸೈಟಿಗೆ ಭೇಟಿ ನೀಡಿಲ್ಲ. 2006 ರ ಜನವರಿ ತಿಂಗಳ ಕೊನೆಯ ವಾರದಲ್ಲಿ ಹೋಗಿದ್ದೆ, ಆದರೆ ನಿಖರವಾದ ತಾರೀಖು ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರ ಜೊತೆ ಇದ್ದ 4-5 ಜನರ ಹೆಸರು ಗೊತ್ತಿಲ್ಲ, ಆದರೆ ಅವರು ಕುಳಿತುಕೊಂಡಿದ್ದರು. ದೂರುದಾರರು ಕವರ್ ನಲ್ಲಿ ದಾಖಲೆಗಳನ್ನು ತಂದಿದ್ದರು, ಆದರೆ ಯಾವ ದಾಖಲೆಗಳೆಂದು ಗೊತ್ತಿಲ್ಲ. ಫಿರ್ಯಾದಿಯು ಯಾವ ದಾಖಲೆಗಳನ್ನು 2 ನೇ ಆರೋಪಿಗೆ ಕೊಟ್ಟರೆಂದು ಗೊತ್ತಿಲ್ಲ.

2,00,000/- ರೂಪಾಯಿಗಳನ್ನು 2 ನೇ ಆರೋಪಿಯು ಸೊಸೈಟಿಗೆ ಕಟ್ಟಬೇಕೆಂದು ಹೇಳಿದರು, ಆದರೆ ಯಾವತ್ತು ಆ ಹಣ ಕಟ್ಟಬೇಕೆಂದು ಹೇಳಲಿಲ್ಲ. ಕಾನೂನು ಪ್ರಕಾರವಾದ ಕಟ್ಟಬೇಕಾದ ಹಣವನ್ನು ನಾನು ಕಟ್ಟಿರುವುದಾಗಿ, ಆದರೆ ನೀವು ಕೇಳುತ್ತಿರುವ 2,00,000/- ರೂಪಾಯಿಗಳು ಕಾನೂನು ಬಾಹೀರವೆಂದು, ಆದುದರಿಂದ ಅದನ್ನು ಕಟ್ಟುವುದಿಲ್ಲವೆಂದು ಹೇಳಿದರು. ಫಿರ್ಯಾದಿಯ ಜೊತೆ ನಾನು ಮಾತ್ರ ಇದ್ದೆ, ಬೇರೆ ಯಾರು ಇರಲಿಲ್ಲ. 2 ನೇ ಆರೋಪಿಯು ಯಾವ ಯಾವ ದಾಖಲೆಗಳನ್ನು ಫಿರ್ಯಾದಿಗೆ ವಾಪಾಸು ಕೊಟ್ಟರೆಂದು ಗೊತ್ತಿಲ್ಲ.

ಫಿರ್ಯಾದಿ ಸೀತಾರಾಮ ಅವರು ನನಗೆ 30 ವರ್ಷಗಳಿಂದ ಪರಿಚಯ. ಅವರು ನನ್ನ ಸ್ನೇಹಿತರು. 2006 ರ ಜನವರಿ ತಿಂಗಳ ಕೊನೆಯ ವಾರದಲ್ಲಿ ನಾನು ಖನಿಜ ಭವನಕ್ಕೆ ಹೋಗಿಲ್ಲ, ಅಲ್ಲಿ 2 ಮತ್ತು 3 ನೇ ಆರೋಪಿತರನ್ನು ನೋಡಿಲ್ಲವಾದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ 2 ನೇ ಆರೋಪಿಯು ಫಿರ್ಯಾದಿಗೆ ಹಣ ಕೇಳಿಲ್ಲ, ಫಿರ್ಯಾದಿಯು ದಾಖಲೆಗಳನ್ನು ಕೊಟ್ಟಿಲ್ಲವೆಂದರೆ ಸರಿಯಲ್ಲ. ನಾನು ಹೇಳಿದಂತೆ 2 ನೇ ಆರೋಪಿಯು ಫಿರ್ಯಾದಿಗೆ ಕಾನೂನು ಬಾಹೀರವಾಗಿ 2,00,000/- ರೂಪಾಯಿಗಳನ್ನು ಕೇಳಿಲ್ಲವೆಂದರೆ ಸರಿಯಲ್ಲ. ಫಿರ್ಯಾದಿ ಸೀತಾರಾಮ ಅವರು ನನಗೆ 30 ವರ್ಷಗಳಿಂದ ನನ್ನ ಸ್ನೇಹಿತರಾಗಿದ್ದರಿಂದ ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**